1986	991
1987	1670
1988	1560
1989	1131
1990	1301

ಆ) ರಾಜ್ಯ ಗೌರವಧನ ನಿಯಮಗಳ ಅನುಸಾರ ಅವಶ್ಯವಾದ ಎಲ್ಲಾ ದಾಖಲೆಗಳನ್ನೂ ದಿನಾಂಕ 31-12-1982ರೊಳಗೆ ಸಲ್ಲಿಸಬೇಕೆಂದು ಪ್ರಕಟಿಸಲಾಗಿತ್ತು.

ಇ) ಈ ಅರ್ಜಿಗಳಿಲ್ಲಾ ನಿಗದಿತ ದಿನಾಂಕವಾದ 31-12-1982ರ ನಂತರ ಬಂದಿವೆ. ಈ ಅರ್ಜಿಗಳಲ್ಲಿ ಕೆಲವು ಮಂಜೂರಾಗಿವೆ. ಸುಮಾರು 2000 ಅರ್ಜಿಗಳು ಬಾಕಿ ಇವೆ. ಉಳಿದವು ತಿರಸ್ಕೃತವಾಗಿವೆ. ಕೆಲವು ಅರ್ಜಿಗಳಿಗೆ ಅರ್ಜಿದಾರರು ಪೂರ್ಣ ಮಾಹಿತಿಗಳನ್ನು ಒದಗಿಸಿರುವುದಿಲ್ಲ. ಅದುದರಿಂದ ಬಾಕಿ ಇವೆ. ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲು ಒಂದು ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ. ಈ ಅರ್ಜಿಗಳನ್ನು ಶೀಘ್ರವಾಗಿ ಇತ್ಯರ್ಥ ಮಾಡಲಾಗುವುದು. ಪೂರ್ಣ ಮಾಹಿತಿ ಇಲ್ಲದ ಅರ್ಜಿಗಳನ್ನು ಅರ್ಜಿದಾರರು ಮಾಹಿತಿ ಒದಗಿಸಿದಲ್ಲಿ ಪರಿಶೀಲಿಸಲಾಗುವುದು ಮತ್ತು ಗೌರವಧನವನ್ನು ಮಂಜೂರಾತಿಯ ದಿನಾಂಕದಿಂದ ಕೊಡಲಾಗುವುದು.

ಈ) ಪೂರ್ಣ ಮಾಹಿತಿಗಳನ್ನು ಒದಗಿಸಿದರೆ, ಅತ್ಯಂತ ಶೀಘ್ರವಾಗಿ ಪರಿಹಾರ ನೀಡಲಾಗುವುದು.

ಮನೆಗಂದಾಯ ವೈಜ್ಞಾನಿಕವಾಗಿ ನಿಗದಿ ಮಾಡುವ ಬಗ್ಗೆ.

3252 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ನಗರಸಭೆ ಪುರಸಭೆ, ಮಹಾನಗರ ಪಾಲಿಕೆಗಳಿಂದ ಮನೆಗಂದಾಯವನ್ನು ವೈಜ್ಞಾನಿಕವಾಗಿ ನಿಗದಿಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಆ) ತುರ್ತಾಗಿ ತೊಂದರೆಗೊಳಗಾಗಿರುವ ನಾಗರೀಕರಿಗೆ ಪರಿಹಾರ ನೀಡಲು ತಾತ್ಕಾಲಿಕ ಕ್ರಮಗಳನ್ನು ಸರ್ಕಾರವು ಕೈಗೊಂಡಿದೆಯೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) ಇದರ ಬಗ್ಗೆ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ನೇಮಿಸಲಾಗಿದೆ. ವರದಿ ಬಂದ ಕೂಡಲೇ ಇದರ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು.

ಆ) ತೊಂದರೆಗೆ ಒಳಗಾದವರು ಮೇಲ್ಮನವಿ ಸಲ್ಲಿಸಬಹುದು.

ಹೋಮ್ ಗಾರ್ಡ್ಸ್ ಬಗ್ಗೆ.

3128 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ರಾಜ್ಯ ಸಚಿವರು ಬಂದೀಖಾನೆ ಮತ್ತು ಗೃಹ ರಕ್ಷಕ ದಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯ ಸರ್ಕಾರವು ಒಟ್ಟು ಎಷ್ಟು ಮಂದಿ ಹೋಮ್ ಗಾರ್ಡ್ಸ್‌ಗಳನ್ನು ನೇಮಿಸಿಕೊಂಡಿದೆ?